## ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ .

## ಸಿ.ಸಿ. ನಂ. **147 / 2019**

ಸಿಡಬ್ಲ್ಯೂ: **1**
ಪಿಡಬ್ಲ್ಯೂ:**1**

ದಿನಾಂಕಃ **15-11-2025**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

| | |
|---|---|
| ಸಾಕ್ಷಿಯ ಹೆಸರು | - ಹಣಮಂತ |
| ತಂದೆಯ/ಗಂಡನ ಹೆಸರು | - ಮರೆಪ್ಪ |
| ವಯಸ್ಸು | - **56** ವರ್ಷ |
| ಉದ್ಯೋಗ | - ಶಿರಸ್ತೆದಾರರು |
| ವಾಸಸ್ಥಳಃ | - ಯಾದಗಿರಿ |

ಮುಖ್ಯ ವಿಚಾರಣೆಃ ಸ.ಸ.ಅಭಿಯೋಜಕರಿಂದಃ

ದಿನಾಂಕ 05.08.2019 ರಿಂದ 30.06.2021 ರವರೆಗೆ ನಾನು ಪ್ರಭಾರ ಮುಖ್ಯ ಆಡಳಿತಾಧಿಕಾರಿಯಾಗಿ ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 09.09.2019 ರಂದು ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಆದೇಶ ಸಂಖ್ಯೆ 120/2019 ನೇದ್ದರಲ್ಲಿ ಆರೋಪಿತನ ವಿರುದ್ಧ ಖಾಸಗಿ ಪಿರ್ಯಾದಿಯನ್ನು ದಾಖಲಿಸಲು ಆದೇಶ ಮಾಡಿದ್ದರು. ಅದೇ ರೀತಿ ಅಧಿಸೂಚನೆ ನಂ. 1/2017 ದಿನಾಂಕ 25.07.2017 ರಂದು ಜವಾನ ಹುದ್ದೆಗೋಸ್ಕರ ಪ್ರಕರಣೆ ಆಗಿತ್ತು. ಅದರಂತೆ ಎಲ್ಲಾ ಆಕಾಂಕ್ಷಿಗಳು ಜವಾನ ಹುದ್ದೆಗೋಸ್ಕರ ಅರ್ಜಿಯನ್ನು ಸಲ್ಲಿಸಿದ್ದರು ಅವರಲ್ಲಿ 25 ಜನರನ್ನು ಜವಾನ ಹುದ್ದೆಗೋಸ್ಕರ ಆದೇಶ ಸಂಖ್ಯೆ 20/2018 ದಿನಾಂಕ 06.03.2018 ರಂದು ಆಯ್ಕೆಯಾದವರ ಹೆಸರುಗಳನ್ನು ಪ್ರಕಟಿಸಲಾಗಿತ್ತು. ಸದರಿ ಆದೇಶದಲ್ಲಿ ಆಯ್ಕೆಯಾದವರು ಸಂಬಂಧಪಟ್ಟ ದಾಖಲೆಗಳನ್ನು ಪ್ರಾಧಿಕಾರಕ್ಕೆ ನೀಡಬೇಕೆಂದು ಇತ್ತು. ಅದೇ ರೀತಿ ಸದರಿ ಆದೇಶದಲ್ಲಿ ಆಯ್ಕೆಯಾದ ಜವಾನರು ದಾಖಲೆಗಳನ್ನು ಕಾನೂನು ಬದ್ಧವಾಗಿ ಸಲ್ಲಿಸಬೇಕು ಸದರಿ ದಾಖಲೆಗಳು ಕಾನೂನು ಬದ್ಧವಾಗಿ ಇಲ್ಲದಿದಾಗ ಸದರಿ ಆಯ್ಕೆ ಆದ ಜವಾನರನ್ನು ಸೇವೆ ಇಂದ ವಜಾ ಮಾಡಲಾಗುತ್ತದೆ ಎಂದು ಇತ್ತು. ಆ ಪ್ರಕಾರ ಆಯ್ಕೆ ಆದ 25 ಜವಾನರು ಸಂಬಂಧಪಟ್ಟ ದ್ಖಾಲೆಗಳನ್ನು ಹಾಜರುಪಡಿಸಿದ್ದರು. ಸದರಿ ಆಯ್ಕೆಯಾದ ಜವಾನರ ಸಂಬಂಧಪಟ್ಟ ದ್ಖಾಲೆಗಳನ್ನು ಪರಿಶೀಲನಾ ಪ್ರಾಧಿಕಾರಕ್ಕೆ ಕಳುಹಿಸಿಕೊಡಲಾಗಿತ್ತು. ಕ್ಷೇತ್ರ ಶಿಕ್ಷಣಾಧಿಕಾರಿ, ರಾಯಚೂರು ರವರು ಸುಧಾಕಾಂತ್ ತಂದೆ ಹನುಮಂತ ಸಾಕಿನ ಯರಮರಸ್ ರವರ ಅಂಕಪಟ್ಟಿಯು ತಿದ್ದುಪಡಿಯಾಗಿರುತ್ತದೆ ಹಾಗೂ ಸದರಿ ದಾಖಲೆಯು ನೈಜತೆಯಿಂದ ಇರುವುದಿಲ್ಲ ಎಂದು ಮಾಹಿತಿಯನ್ನು ದಿನಾಂಕ 12.06.2018 ರಂದು ನೇಮಕಾತಿ ಪ್ರಾಧಿಕಾರ, ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಯಾದಗಿರಿ ರವರಿಗೆ ನೀಡಿದ್ದರು. ಆರೋಪಿತನಾದ ಸುಧಾಕಾಂತ್ ರವರ ಅಂಕಪಟ್ಟಿಯಲ್ಲಿ 248 ಇದ್ದದನ್ನು 348 ಎಂದು ತಿದ್ದುಪಡಿ ಮಾಡಿದ್ದರು ಎಂದು ಹೇಳುತಾರೆ. ಆದ್ದರಿಂದ ನಾವು

ಆರೋಪಿತನಿಗೆ ನೋಟೀಸ್ ಅನ್ನು ನೀಡಿ ಆತನನ್ನು ಸೇವೆಯಿಂದ ವಜಾ ಮಾಡಿದ್ದೆವು. ಆದ್ದರಿಂದ ಆರೋಪಿತನು ಜವಾನ ಹುದ್ದೆಯನ್ನು ಪಡೆಯುವುದಕ್ಕೋಸ್ಕರ ಆತನು ತನ್ನ ಅಂಕಪಟ್ಟಿಯಲ್ಲಿ ಅಂಕಗಳನ್ನು ತಿದ್ದುಪಡಿ ಮಾಡಿ ನೇಮಕಾತಿ ಪ್ರಾಧಿಕಾರಕ್ಕೆ ಸಲ್ಲಿಸಿ ಮೋಸ ಮಾಡಿರುತ್ತಾನೆ ಎಂದು ಹೇಳಿ ನಾನು ಖಾಸಗಿ ಪಿರ್ಯಾಧಿಯನ್ನು ದಾಖಲಿಸುತ್ತೇನೆ.

ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಿರುತ್ತಾನೆ.

1. ದಿನಾಂಕ 25.09.2019 ರಂದು ನೀಡಿದ ಖಾಸಗಿ ಪಿರ್ಯಾಧಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು ಅದರ ಮೇಲಿರುವ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು.

2. ದಿನಾಂಕ 25.11.2022 ರಂದು ಮುಖ್ಯ ಆಡಳಿತಾಧಿಕಾರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ದವರು ಈ ಮಾನ್ಯ ನ್ಯಾಯಾಲಯಕ್ಕೆ ಮೂಲ ದಾಖಲಾತಿಗಳನ್ನು ಸಲ್ಲಿಸುತ್ತಿರುವ ಕುರಿತು ನಿವೇದನೆಯನ್ನು ಹಾಜರುಪಡಿಸಿರುತ್ತಾರೆ. ಅದನ್ನು ನಿಪಿ-2 ಎಂದು ಗುರುತಿಸಲಾಯಿತು.

3. 25.11.2022 ರ ನೇಮಕಾತಿ ಆದೇಶದ ದೃಡಿಕೃತ ನಕಲು ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ಅದನ್ನು ನಿಪಿ-3 ಎಂದು ಗುರುತಿಸಲಾಯಿತು.

4. ದಿನಾಂಕ 12.06.2018 ರಂದು ಕೇತ್ರ ಶಿಕ್ಷಣಾಧಿಕಾರಿಗಳು ರಾಯಚೂರು ರವರು ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಯಾದಗಿರಿ ರವರಿಗೆ ನೀಡಿದ ವರದಿಯನ್ನು ಹಾಜರುಪಡಿಸಿರುತ್ತಾರೆ. ಅದನ್ನು ನಿಪಿ-4 ಎಂದು ಗುರುತಿಸಲಾಯಿತು.

5. 7 ನೇ ತರಗತಿ ಅಂಕಪಟ್ಟಿ ನೈಜತೆ ಪರಿಶೀಲನಾ ದೃಡಿಕರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತಾರೆ. ಅದನ್ನು ನಿಪಿ-5 ಎಂದು ಗುರುತಿಸಲಾಯಿತು.

6. ದಿನಾಂಕ 05.07.2018 ರಂದು ಪ್ರಧಾನ ಗುರುಗಳು ಸರ್ಕಾರಿ ಹಿರಿಯ ಪ್ರಾರ್ಥಮಿಕ ಶಾಲೆ, ಯರಮರಸ್ ತಾಃ ಮತ್ತು ಜಿಃ ರಾಯಚೂರು ರವರು ಕೈಬರಹದಲ್ಲಿ ನೀಡಿದ ಅಂಕಪಟ್ಟಿಯನ್ನು ಹಾಜರುಪಡಿಸಿರುತ್ತಾರೆ. ಅದನ್ನು ನಿಪಿ-6 ಎಂದು ಗುರುತಿಸಲಾಯಿತು.

7. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಯರಮರಸ್ ರವರು ನೀಡಿದ ದ್ವಿಪ್ರತಿ ಪ್ರಗತಿ ಪತ್ರ ವನ್ನು ಹಾಜರುಪಡಿಸಿರುತ್ತಾರೆ. ಅದನ್ನು ನಿಪಿ-7 ಎಂದು ಗುರುತಿಸಲಾಯಿತು.

8. ದಿನಾಂಕ 27.10.2018 ರಂದು ಕಾರಣ ಕೇಳುವ ನೋಟೀಸನ್ನು ಹಾಜರುಪಡಿಸಿರುತ್ತಾರೆ. ಅದನ್ನು ನಿಪಿ-8 ಎಂದು ಗುರುತಿಸಲಾಯಿತು.

9.ದಿನಾಂಕ 09.11.2018 ರ ಕಚೇರಿಯ ಆದೇಶವನ್ನು ಹಾಜರುಪಡಿಸಿರುತ್ತಾರೆ. ಅದನ್ನು ನಿಪಿ-9 ಎಂದು ಗುರುತಿಸಲಾಯಿತು.

ಪಾಟೀ ಸವಾಲು ಆರೋಪಿ ಪರ ವಕೀಲರಾದ ಃಶ್ರೀ ವಿ.ಆರ್.ಎಸ್. ರವರಿಂದಃ

ಜವಾನ ಹುದ್ದೆಗಳ ನೇಮಕಾತಿ ಆಗುವಾಗಲೀ ಅಥವಾ ಅದಕ್ಕಿಂತ ಮುಂಚೆಯಾಗಲೀ ನಾನು ಮುಖ್ಯ ಆಡಳಿತಾಧಿಕಾರಿಯಾಗಿ ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಯಾದಗಿರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರಲಿಲ್ಲ ಎಂದರೆ ಸರಿ. ಆದ್ದರಿಂದ ಜವಾನ ಹುದ್ದೆಗಳ ನೇಮಕಾತಿಯಲ್ಲಿ ಆಗು ಹೋಗುಗಳ ಬಗ್ಗೆ ನನಗೆ ಸ್ವತಃ ಗೊತ್ತಿರಲಿಲ್ಲ. ಖಾಸಗಿ ಪಿರ್ಯಾದಿಯೊಂದಿಗೆ ನನ್ನ ಪ್ರಮಾಣೀಕೃತ ಪ್ರಮಾಣ ಪತ್ರವನ್ನು ಸಲ್ಲಿಸಿರುವುದಿಲ್ಲ. ನಾನು ವೈಯಕ್ತಿಕವಾಗಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಯರಮರಸ್‌ಗೆ ಹೋಗಿ ಆರೋಪಿತನ ಅಂಕಪಟ್ಟಿಯ ನೈಜತೆಯ ಬಗ್ಗೆ ಮಾಹಿತಿಯನ್ನು ಪಡೆದಕೊಂಡಿರುವುದಿಲ್ಲ ಅದೇ ರೀತಿ ಆರೋಪಿತನ ಅಂಕಪಟ್ಟಿಯ ಕುರಿತು ಕ್ಷೇತ್ರ ಶಿಕ್ಷಣಾಧಿಕಾರಿಗಳು, ರಾಯಚೂರು ರವರ ಬಳಿ ಹೋಗಿ ದಾಖಲಾತಿಗಳ ನೈಜತೆಯ ಬಗ್ಗೆ ಮಾಹಿತಿಯನ್ನು ಪಡೆದುಕೊಂಡಿರುವುದಿಲ್ಲ.

ಆರೋಪಿತನು ನಮ್ಮ ಪ್ರಾಧಿಕಾರಕ್ಕೆ ನೀಡಿದ ಅಂಕಪಟ್ಟಿಯನ್ನು ಅದನ್ನು ಪರಿಶೀಲನೆ ಮಾಡಲು ಉಪ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ರಾಯಚೂರು ರವರಿಗೆ ಕಳುಹಿಸಿಕೊಟ್ಟಿದ್ದೆವು ಎಂದರೆ ಸರಿ. ನಿಪಿ-4 ಮತ್ತು 5 ರಲ್ಲಿ ಆರೋಪಿತನ ಶಾಲಾ ಹಾಜರಾತಿಯ ಮತ್ತು ಪ್ರವೇಶ ಪಡೆದ ಸಂಖ್ಯೆಯನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ನಿಪಿ-6 ರಲ್ಲಿ ಕನಿಷ್ಟ ಅಂಕಗಳು ಅದೇ ರೀತಿ ಷನಮಾಸಿಕ ಫಲಿತಾಂಶ ಸಹಾ ಬರೆದಿರುವುದಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಮೇಲೊನಟಕ್ಕೆ ದಾಖಲಾತಿಗಳು ನೈಜತೆಯಿಂದ ಕೂಡಿರುವುದಿಲ್ಲ ಎಂದು ಕಂಡು ಬಂದರೆ ಅರ್ಜಿಯನ್ನು ತಿರಸ್ಕರಿಸಬಹುದು ಎಂದರೆ ಸರಿ.

ಆರೋಪಿತನು ತನ್ನ ಅಂಕಪಟ್ಟಿಯಲ್ಲಿ 248 ಇದ್ದದನ್ನು 348 ಎಂದು ತಿದ್ದುಪಡಿ ಮಾಡಿರುತ್ತಾನೆ ಎಂದು ನಿಪಿ-1 ರಲ್ಲಿ ನೀವು ಬರೆದಿರುವುದಿಲ್ಲ ಎಂದರೆ ಸರಿ ಸಾಕ್ಷಿಯು ಮುಂದುವರೆದು ಅಂಕಪಟ್ಟಿ ಯಲ್ಲಿ ತಿದ್ದುಪಡಿ ಮಾಡಿದ ಬಗ್ಗೆ ಇರುತ್ತದೆ ಎಂದು ಹೇಳುತ್ತಾರೆ. 7 ನೇ ತರಗತಿ ತೇರ್ಗಡೆ ಹೊಂದಿದವರು ಜವಾನ ಹುದ್ದೆಗೋಸ್ಕರ ಅರ್ಜಿಯನ್ನು ಸಲ್ಲಿಸಬಹುದಾಗಿತ್ತು ಎಂದರೆ ಸರಿ. ದಿನಾಂಕ 09.09.2019 ರಂದು ಮಾನ್ಯ ಜಿಲ್ಲಾ ಮತ್ತು ಸತ್ರ

ನ್ಯಾಯಾಲಯವು ಆರೋಪಿತನ ವಿರುದ್ಧ ದೂರನ್ನು ನೀಡಲು ಆದೇಶ ಮಾಡಿದ ದಾಖಲೆಯನ್ನು ದೂರಿನೊಂದಿಗೆ ಸಲ್ಲಿಸಿರುತ್ತೇನೆ.

ಈ ಖಾಸಗಿ ಪಿರ್ಯಾದಿಯನ್ನು ನಾನು ಆರೋಪಿತನ ವಿರುದ್ಧ ದಾಖಲು ಮಾಡುವುದಕ್ಕಿಂತ ಮುಂಚೇ ಆರೋಪಿತನು ಮಾನ್ಯ ಶೋರಾಪುರ ನ್ಯಾಯಾಲಯದಲ್ಲಿ ಜವಾನನಾಗಿ ಕೆಲಸ ಮಾಡುತ್ತಿದ್ದನು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನವೆಂಬರ್ 2018 ರಂದು ಆರೋಪಿತನನು ವಜಾ ಮಾಡಲಾಗಿತ್ತು ಎಂದು ಹೇಳುತ್ತಾರೆ.

ದಿನಾಂಕ 05.11.2018 ರಂದು ಆರೋಪಿತನು ಅಂಗವಿಕಲಾಂಗ ನಾಗಿರುವ ಕಾರಣ ಆತನಿಗೆ ರಾಯಚೂರಿನಿಂದ ಶೋರಾಪುರ ನ್ಯಾಯಾಲಯಕ್ಕೆ ಬಂದು ಹೋಗಲು ಅನಾನುಕೂಲ ಆಗುತ್ತದೆ ಎಂದು ಹೇಳಿ ಆತನು ರಾಜೀನಾಮೆ ಅರ್ಜಿಯನ್ನು ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಯಾದಗಿರಿ ರವರಿಗೆ ನೀಡಿದ್ದನು ಎಂದು ನನಗೆ ಗೊತ್ತಿರುವುದಿಲ್ಲ.

ಆರೋಪಿತನು ಜವಾನ ಹುದ್ದೆಯನು ಪಡೆಯುವುದಕೋಸ್ಕರ ಆತನು ತನ್ನ ಅಂಕಪಟ್ಟಿಯಲ್ಲಿ 248 ಇದ್ದದನ್ನು 348 ಎಂದು ತಿದ್ದುಪಡಿ ಮಾಡಿ ಮೋಸ ಮಾಡಿರುತ್ತಾನೆಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದೇನೆಂದರೆ ಸರಿಯಲ್ಲ. ಆರೋಪಿತನ ಶಾಲಾ ದಾಖಲಾತಿಗಳನ್ನು ಶಿಕ್ಷಣ ಇಲಾಖೆಯವರು ಸರಿಯಾಗಿ ಪರಿಶೀಲನೆ ಮಾಡದೇ ನಿಪಿ-4 ರಿಂದ 7 ನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ನನಗೇನು ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದೇನೆಂದರೆ ಸರಿಯಲ್ಲ. ದಾಖಲೆಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.